ಅಭಿನಂದಿಸೋಕ್ಕೆ ಬಹಳ ಜನ ಫೋನ್ ಮಾಡ್ತಿರಬೇಕು...' ಎಂದಂದು ಮತ್ತೊಮ್ಮೆ ಮಿಸ್‌ಕಾಲ್ ಕೊಟ್ಟರು –ಅವರಾಗಿಯೇ ಮಾಡಲಿ ಎಂದು. ಎಷ್ಟೊತ್ತಾದರೂ ಕಾಲ್ ಬರಲೇ ಇಲ್ಲ. ಹಾಗೇ ತಾವು ಬರೆಯುವ ಟೇಬಲ್ ಮುಂದೆ ಕುಳಿತು ಯೋಚಿಸಲಾರಂಭಿಸಿದರು. ಎಲ್ಲೋ ತನ್ನ ಆಲೋಚನೆಯೇ ಕೆಳಮಟ್ಟದಿಂದ ಕೂಡಿದೆಯೇ ಎನಿಸಿತು. ಅಷ್ಟರಲ್ಲಿ ಬಂದ ಪ್ರೊ. ಕಾಳೇಶ್‌ರ ಕರೆ ಒಂದೇ ರಿಂಗಿಗೆ ಕಟ್ಟಾಯಿತು. 'ನಾನೇ ಮಿಸ್‌ಕಾಲ್ ಅಂದರೆ ನನಗೇ ಮಿಸ್‌ಕಾಲ್ ಕೊಡ್ತಾನಲ್ಲ ಬಡ್ಡೀಮಗ...' ಎಂದುಕೊಂಡು ವಾಪಸು ಮಾಡಿದರು. ನೂರಾರು ಕಾಲ್‌ಗಳು ಬರುತ್ತಿದ್ದುದರಿಂದ ಒಂದೇ ರಿಂಗಿಗೆ ಎತ್ತಿಬಿಟ್ಟರು ಕಾಳೇಶ್. ಮಾತಾಡಲು ತೊಳಲಾಡಿದ ಪಾವಂದಯ್ಯ ನೇರವಾಗಿ ಸಾರಿ ಎಂದು ಕೇಳಲೂ ಆಗದೆ, ಸುಮ್ಮನಿರಲೂ ಆಗದೆ ಪದಗಳಿಗಾಗಿ ತಡಕಾಡುತ್ತ ಫೋನ್ ಕೆಳಕ್ಕೆ ಇಟ್ಟುಬಿಟ್ಟರು. ಯಾವುದೋ ಧ್ಯಾನದಲ್ಲಿದ್ದ ಕಾಳೇಶರೂ ತಮ್ಮ ಫೋನನ್ನು ಸುಮ್ಮನೆ ಜೇಬಿಗೆ ಇಳಿಬಿಟ್ಟು ಅಭಿನಂದಿಸಲು ಮನೆಗೆ ಹುಡುಕಿಕೊಂಡು ಬಂದವರೊಂದಿಗೆ ಮಾತುಕತೆಯಲ್ಲಿ ತೊಡಗಿಕೊಂಡರು.

ಸುಮಾರು ಗಂಟೆ ಎರಡು ಗಂಟೆಯ ನಂತರ ಯಾರಿಗೋ ಮಾಡಲೆಂದು ಫೋನ್ ಕೈಗೆತ್ತಿಕೊಂಡರೆ ಇನ್ನೂ ಮೀಟರ್ ಓಡುತ್ತಲೇ ಇದೆ! ಗಾಬರಿಬಿದ್ದ ಪಾವಂದಯ್ಯ ಥಟ್ಟನೆ ಫೋನ್ ಕಟ್ಮಾಡಿ ನೋಡಿದರೆ ಇದ್ದ ಕರೆನ್ಸಿಯೆಲ್ಲ ಖಾಲಿಯಾಗಿಬಿಟ್ಟಿದೆ! 'ನನಗಂತೂ ಬುದ್ಧಿಯಿಲ್ಲ ಅಂದ್ರೆ ಆ ನನ್ಮಗನಿಗಾದ್ರೂ ಬುದ್ಧಿ ಬೇಡ್ವಾ... ಫೋನ್ ಕಟ್ ಮಾಡೋಕ್ಕೆ ಏನ್ ಧಾಡಿಯಾಗಿತ್ತು' ಎಂದು ಹಿಡಿಶಾಪ ಹಾಕಿದರು.

**ಕೋತಿಯ ಹಿಂಡು ತೋಟಕ್ಕೆ ಬರದೇ ಇದ್ದರೂ, ಉಳಿದಿದ್ದ ಒಂದು ಕೋತಿ ತನ್ನ ಮಡಿಲಲ್ಲಿ ಮರಿಯೊಂದನ್ನ ಹಿಡಿದುಕೊಂಡು ಓಡಾಡುತ್ತಿದ್ದುದನ್ನು ಪಾವಂದಯ್ಯ ಕಂಡರು. ಸಾಮಾನ್ಯವಾಗಿ ಕೋತಿ ಮರಿಗಳು ತಾವೇ ತಾಯಿಯ ಹೊಟ್ಟೆಯನ್ನು ತಬ್ಬಿಹಿಡಿದಿರುತ್ತವೆ. ಆದರೆ, ಇಲ್ಲಿ ತಾಯಿಯೇ ಮುಂದಿನ ಒಂದು ಕಾಲಲ್ಲಿ ಮರಿಯನ್ನು ತಬ್ಬಿಹಿಡಿದು ಮೂರುಕಾಲಲ್ಲೇ ಕುಂಟುವಂತೆ ನಡೆಯುತ್ತಿದೆ!**

ಅದೇ ವೇಳೆಗೆ ಪ್ರೊ. ಕಾಳೇಶ್ರಿಗೆ ಬಂದ ಕರೆಯೊಂದರಲ್ಲಿ 'ಅಷ್ಟೊತ್ತಿಂದ ಟ್ರೈ ಮಾಡ್ತಾಯಿದ್ದೀನಿ... ಯಾವಳ್ ಜೊತೆ ಮಾತಾಡ್ತಿದ್ರೀ...' ಎಂದು ತರಾಟೆಗೆ ತೆಗೆದುಕೊಂಡ ಹೆಂಡತಿ ಒಂದೇ ಸಮನೆ ಝಾಡಿಸಲಾರಂಭಿಸಿದಳು. ಹೌದಾ ಅಂತ ಕಾಲ್‌ಕಟ್ ಮಾಡಿ ನೋಡಿದರೆ 'ಬೈಟುದೋಸೆ' ಅಂತಿದೆ! 'ಅಯ್ಯೋ ಪರದೇಶೀ ಮುಂಡೇದು... ಒಂದು ಸೆಕೆಂಡ್ ಮಾತಾಡಿದ್ರೆ ಎಲ್ಲಿ ಒಂದು ಪೈಸಾ ಕಟ್ಟಾಗಿಬಿಡ್ತದೋ ಅಂತಿದ್ದವನಿಗೆ ಅದೆಷ್ಟು ರುಪಾಯಿ ಕಟ್ಟಾಯಿತೋ ಪಾಪ...' ಎಂದು ಮರುಗಿದರು.

ಅಷ್ಟರಲ್ಲಿ ಮನೆಗೆ ಬಂದ ಮಲ್ಲೇಶಿ ತೋಟಬಿಟ್ಟು ಹೋಗಿರುವ ಕೋತಿಗಳು ಅರ್ಧ ಕಿಲೋಮೀಟರ್ ದೂರದಲ್ಲಿರುವ ಅರಳೀಮರದಲ್ಲಿ ಠಿಕಾಣಿ ಹೂಡಿರುವುದಾಗಿಯೂ, ಇವತ್ತು ನಾಳೆಯೊಳಗಾಗಿ ಮತ್ತೆ ಬರಬಹುದೆಂದೂ ತಿಳಿಸಿದ. ಈ ಕೋತಿಗಳ ನೆಪದಿಂದ ತಾನು ತೋಟ